

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ


SARAYU - Kannada Monthly Regn. No. KARKAN/2014/62363

July Vol. : 10 Issue : 2 5124/ಶುಭಕೃತ್ ಸಂವತ್ಸರ ಜುಲೈ 2023 ಪುಟ 8 Rs. 10/-

Postal Regn No. PTR/136/2022-24

Licensed to Post without pre-payment

License No: SK/WPP/PTR/117/2022-24


## ಸ್ವತ್ವದ ಆಧಾರದ ಮೇಲೆ ಭಾರತದ ಪುನರುತ್ಥಾನ ಎಂಬ ವಿಷಯದ ರಾಷ್ಟ್ರೀಯ ವಿಚಾರ ಸಂಕಿರಣ ಕಲ್ಲಡ್ಕ ಶ್ರೀರಾಮ ಪ್ರಥಮದರ್ಜೆ ಮಹಾವಿದ್ಯಾಲಯದಲ್ಲಿ 20.06.2023ರಂದು ಸಂಪನ್ನಗೊಂಡಿತು.




ಸುವರ್ಣ ನ್ಯೂಸ್ ಸುದ್ದಿ ವಿಭಾಗದ ಮುಖ್ಯಸ್ಥ ಶ್ರೀ ಅಜಿತ್ ಹನಮಕ್ಕನವರ್ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.

ವಿದ್ಯಾಕೇಂದ್ರದ ಶೈಕ್ಷಣಿಕ ಪರಿಸರವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ತುಳಸಿ ಗಿಡಕ್ಕೆ ನೀರೆರೆದು ಪೂಜೆ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಇವರು "ಇದುವೇ ನಿಜವಾದ ಸ್ವತ್ವ ಎಂದು ಮಾತನ್ನಾರಂಭಿಸಿ ಇಂದು ಭಾರತಕ್ಕೆ ಸ್ವತ್ವದ ಆಧಾರದ ಮೇಲೆ ಬೆಳೆದು ನಿಲ್ಲುವ ವಿಶ್ವಾಸ ಮೂಡಿದೆ. ಇದು ಇಂದಿನ ಅಗತ್ಯ ಭಾರತ ಆ ನಿಟ್ಟಿನಲ್ಲಿ ಮುಂದುವರೆಯುತ್ತಿದೆ" ಎಂದರು.



ನಮ್ಮತನದ ಆಧಾರದ ಮೇಲೆ ಬದುಕು ಕಟ್ಟಿಕೊಳ್ಳಬೇಕಾಗಿದೆ. ಸ್ವತ್ವದ ಚಿಂತನೆಯಲ್ಲಿ ಭಾರತದ ಬೆಳವಣಿಗೆ ಹೇಗಿರಬೇಕೆಂಬುದಕ್ಕೆ ಈ ಸಂಕಿರಣ ಬೆಳಕು ಚೆಲ್ಲಲಿದೆ.

ಡಾ। ಪ್ರಭಾಕರ ಭಟ್, ಕಲ್ಲಡ್ಕ
ಸಂಸ್ಥಾಪಕರು, ಶ್ರೀರಾಮ ವಿದ್ಯಾಕೇಂದ್ರ



ಭಾರತವನ್ನು ಹಾಳುಗೆಡವಲು ಹೊರಗಿನವರಿಗೆ ಅಸಾಧ್ಯ. ಒಳಗಿನ ವ್ಯವಸ್ಥೆಗಳು, ಮಾನಸಿಕತೆ ಹಾಗೂ ಪ್ರವೃತ್ತಿ ಭಾರತದಲ್ಲಿ ಬದಲಾವಣೆಗಳನ್ನು ತರಬಲ್ಲದು. ಸದ್ಯದ ಪರಿಸ್ಥಿತಿಯಲ್ಲಿ ಭಾರತ ಅಮೃತ ಕಾಲದ ಸನಿಹದಲ್ಲಿದೆ.

ಶ್ರೀ ಅಜಿತ್ ಹನಮಕ್ಕನವರ್
ಸುದ್ದಿ ವಿಭಾಗದ ಮುಖ್ಯಸ್ಥರು
ಸುವರ್ಣ ನ್ಯೂಸ್



ಭಾರತದ ಆರ್ಥಿಕತೆ ಧರ್ಮ ಮತ್ತು ಮೋಕ್ಷಗಳ ನಡುವೆ ಅರ್ಥ ಕಾಮಗಳನ್ನು ಆಚರಿಸುವ ವ್ಯವಸ್ಥೆಯ ಮೇಲೆ ನಿಂತಿದೆ. ಭಾರತದ ಮಾನಸಿಕತೆಗೆ ವಿದೇಶಿ ಅರ್ಥವ್ಯವಸ್ಥೆ ಸರಿಹೊಂದದು. ಅದಕ್ಕಾಗಿ ಸ್ವತ್ವದ ಆಧಾರದಲ್ಲಿ ನಮ್ಮ ಆರ್ಥಿಕತೆ ಇನ್ನೂ ದೃಢವಾಗಲಿ

ಪ್ರೊ. ಬಿ.ಎಂ ಕುಮಾರಸ್ವಾಮಿ
ವಿಶ್ರಾಂತ ಪ್ರಾಚಾರ್ಯರು
ಶಿವಮೊಗ್ಗ



ಅನಾದಿಕಾಲದಿಂದ ರಾಜ ಪರಂಪರೆಯಿಂದ ಬೆಳೆದ ಭಾರತ–ಕ್ಕೆ ಹೊರಗಿನ ದೇಶದ ಕಾನೂನು, ನ್ಯಾಯ, ಆಡಳಿತ ವ್ಯವಸ್ಥೆ ಹಾಗೂ ನಿರ್ವಹಣೆಯ ಮಾದರಿಗಿಂತ ಇಲ್ಲಿನ ಮಾನಸಿಕತೆಗೆ ಹೊಂದುವ ವ್ಯವಸ್ಥೆಯಿಂದ ಮಾತ್ರ ಬಲಾಢ್ಯ ರಾಷ್ಟ್ರ ನಿರ್ಮಾಣ ಸಾಧ್ಯ.

ಕ್ಯಾ. ಬ್ರಿಜೇಶ್ ಚೌಟ
ನಿವೃತ್ತ ಸೇನಾಧಿಕಾರಿಗಳು
ಸಾಮಾಜಿಕ ಕಾರ್ಯಕರ್ತರು, ಮಂಗಳೂರು



ವಿವೇಕಾನಂದರು ವಿಶ್ವಮಾನವತೆಯ ಪರಿಕಲ್ಪನೆಯೊಂದಿಗೆ ಭಾರತೀಯತೆಯ ಅವಶ್ಯಕತೆ ಸಾರಿದರು. ನಮ್ಮ ಪರಂಪರೆ – ಸ್ವತ್ವಗಳೇ ರಾಷ್ಟ್ರೀಯತೆಯ ಅಡಿಗಲ್ಲು. ವಿಶ್ವದೆದುರು ಭಾರತ ತಲೆಯೆತ್ತುವ ಕ್ಷಣ ಬಂದಿದೆ. ನಾವು ನಮ್ಮ ಜವಾಬ್ದಾರಿ ಅರಿಯಬೇಕಿದೆ.

ಶ್ರೀ ಚಕ್ರವರ್ತಿ ಸೂಲಿಬೆಲೆ
ಚಿಂತಕರು, ಲೇಖಕರು,
ಹಾಗೂ ಪ್ರಖರ ವಾಗ್ಮಿ, ಬೆಂಗಳೂರು

* ಒಂದು ದಿನದ, ನಾಲ್ಕು ಅವಧಿಗಳ ರಾಷ್ಟ್ರೀಯ ವಿಚಾರ ಸಂಕಿರಣ
* ಕರ್ನಾಟಕ ಹಾಗೂ ಹೊರ ರಾಜ್ಯಗಳ ಪ್ರತಿನಿಧಿಗಳು ಭಾಗಿ.
* ಮಂಗಳೂರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಕಣ್ಣೂರು ವಿಶ್ವವಿದ್ಯಾನಿಲಯಗಳ ಪ್ರತಿನಿಧಿತ್ವ.
* ತಾಂತ್ರಿಕ ವಿ.ವಿ, ಆರೋಗ್ಯ ವಿ.ವಿ, ಕಾನೂನು ವಿ.ವಿ, ಸಂಸ್ಕೃತ ವಿ.ವಿ., ಅಲ್ಲದೇ 5 ಖಾಸಗಿ ವಿ.ವಿಗಳು, ಸ್ನಾತಕೋತ್ತರ ವಿಭಾಗ ಮತ್ತು ಸಂಶೋಧನ ವಿದ್ಯಾರ್ಥಿಗಳು ಭಾಗವಹಿಸಿದ್ದರು.
* ಬಿ.ಇಡಿ. ಕಾಲೇಜು, ಪಾಲಿಟೆಕ್ನಿಕ್, ಗುರುಕುಲ, ಪ್ರೌಢ ಹಾಗೂ ಪದವಿಪೂರ್ವ ಕಾಲೇಜುಗಳ ಪ್ರತಿನಿಧಿಗಳಿಂದ ನೋಂದಾವಣೆ.
* ಮಹಾಪುರುಷರ ಧ್ಯೇಯ ವಾಕ್ಯಗಳ ಪ್ರದರ್ಶಿನಿ, ಕಾರ್ಯಕ್ರಮದುದ್ದಕ್ಕೂ ರಾಷ್ಟ್ರಭಾವ ಜಾಗೃತಿಯ ಪ್ರೇರಣಾ ಗೀತೆಗಳು, ವ್ಯವಸ್ಥಿತ ಊಟೋಪಚಾರ, ವಿದ್ಯಾರ್ಥಿಗಳ ದೈನಂದಿನ ಪ್ರಾರ್ಥನೆ, ಎಲ್ಲರಿಗೂ ಮುಕ್ತ ಸಂವಾದಕ್ಕೆ ಅವಕಾಶ. ಹಾಗೂ ಮುಕ್ತ ಪ್ರವೇಶ ಮೆಚ್ಚುಗೆಗೆ ಪಾತ್ರವಾಯಿತು.

59 ಶಿಕ್ಷಣ ಸಂಸ್ಥೆಗಳಿಂದ 228 ಶಿಕ್ಷಕರು, 485 ವಿದ್ಯಾರ್ಥಿಗಳು, 167 ಇತರ ಪ್ರತಿನಿಧಿಗಳು ಸೇರಿ 880 ಮಂದಿ ಭಾಗವಹಿಸಿದ್ದರು.





**ಪ್ರವೇಶೋತ್ಸವ ಕಾರ್ಯಕ್ರಮ 12.6.2023**

ಡಾ। ಕಮಲ ಪ್ರ.ಭಟ್ ಅಗ್ನಿ ಹೋತ್ರಕ್ಕೆ ಅಗ್ನಿ ಸ್ಪರ್ಶ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ-ದರು. ಅಭಿವೃದ್ಧಿ ಸಮಿತಿ ಸದಸ್ಯರು ಮಕ್ಕಳಿಗೆ ಆರತಿ ಮಾಡಿ, ಅಕ್ಷತೆ ಹಾಕಿ, ತಿಲಕ ಇಟ್ಟು ಆಶೀರ್ವದಿಸಿದರು.



ವಿಶ್ವ ಯೋಗ ದಿನಾಚರಣೆಯ ಪ್ರಯುಕ್ತ ಶ್ರೀರಾಮ ಶಿಶುಮಂದಿರ, ಅಕ್ಕಮಹಾದೇವಿ ಶಿಶುಮಂದಿರ, ಶ್ರೀಕೃಷ್ಣ, ಶ್ರೀಗಣೇಶ ಮತ್ತು ಸರಸ್ವತಿ ಶಿಶುಮಂದಿರಗಳಲ್ಲಿ ಯೋಗ ಅಭ್ಯಾಸ ಮಾಡಿಸಲಾಯಿತು.



ಸಾಮೂಹಿಕ ಹುಟ್ಟುಹಬ್ಬ 30.6.23

ಶ್ರೀರಾಮ ಶಿಶುಮಂದಿರದ ಜೂನ್ ತಿಂಗಳ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ ಮಾತಾಜಿ ಶ್ರೀಮತಿ ವಿದ್ಯಾಶ್ರೀ ಮಕ್ಕಳಿಗೆ ಹುಟ್ಟುಹಬ್ಬದ ಆಚರಣೆ ಬಗ್ಗೆ ಮಾತನಾಡಿದರು.

## ಪ್ರಾಥಮಿಕ ಶಾಲೆ



**ಅಧ್ಯಾಪಕರ ಬೈಠಕ್ : 10.6.2023**

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಪರಿಹಾರ ಬೋಧನೆ ಮಾಡುವುದರ ಬಗ್ಗೆ ಶೈಕ್ಷಣಿಕ ಪರಿವೀಕ್ಷಕರಾದ ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್ ಅಧ್ಯಾಪಕರ ಬೈಠಕ್ ನಡೆಸಿದರು.



**ಪೋಷಕರ ಬೈಠಕ್ : 10.6.2023**

3, 4ನೇ ತರಗತಿಯಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪೋಷಕರ ಸಭೆಯಲ್ಲಿ ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್, ಶ್ರೀ ರವಿರಾಜ್ ಕಣಂತೂರು ಮಾರ್ಗದರ್ಶನ ಮಾಡಿದರು. 41 ಪೋಷಕರು ಉಪಸ್ಥಿತರಿದ್ದರು.



**ಶಾಲಾ ಚುನಾವಣೆ : 17.6.2023**

ಉತ್ತಮ ನಾಯಕನ ಆಯ್ಕೆ, ಮತದಾನ, ಪ್ರಜಾಪ್ರಭುತ್ವದ ಮಹತ್ವ ಹಾಗೂ ಚುನಾವಣೆ ಪ್ರಕ್ರಿಯೆಯನ್ನು ತಿಳಿಸುವ ನಿಟ್ಟಿನಲ್ಲಿ ಶಾಲಾ ಚುನಾವಣೆಯು ನಡೆಯಿತು. ಮೊಬೈಲ್ ಇ.ವಿ.ಎಂ ಆ್ಯಪ್ ಮೂಲಕ ಮತದಾನ ನಡೆಸಲಾಯಿತು.



**ಮಾತೃಭಾರತಿ ಬೈಠಕ್, ಯೋಗಾಸನ : 21.6.23**

ಮಾತೃಭಾರತಿ ಬೈಠಕ್‌ನಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ವಿಶ್ವ ಯೋಗ ದಿನದ ಅಂಗವಾಗಿ ಮಾತೆಯರಿಗೆ ಕೆಲವೊಂದು ಆಸನಗಳನ್ನು ಮಾಡಿಸಲಾಯಿತು. ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು.



**ವಿಶ್ವ ಯೋಗ ದಿನಾಚರಣೆ 21.6.23**

ಯೋಗ ದಿನಚಾಚರಣೆಯ ಕಾರ್ಯಕ್ರಮದಲ್ಲಿ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಚಂದ್ರಶೇಖರ ಸಾಲ್ಯಾನ್, ಉಪಸ್ಥಿತರಿದ್ದರು. ಶ್ರೀ ಸುಧೀಂದ್ರ ಶ್ರೀಮಾನ್ ವಿದ್ಯಾರ್ಥಿಗಳಿಗೆ ಯೋಗ ಅಭ್ಯಾಸ ಮಾಡಿಸಿದರು.



**ಸಂಸತ್ತು, ವಿವಿಧ ಸಂಘಗಳ ಉದ್ಘಾಟನೆ : 24.6.23**

ಸಂಸತ್ತಿನ ರಚನೆ ಹಾಗೂ ಮಹತ್ವದ ಕುರಿತು ಬಾಳ್ತಿಲ ಗ್ರಾ.ಪಂ ಸದಸ್ಯರಾದ ಶ್ರೀ ವಿಠಲ್ ನಾಯಕ್ ತಿಳಿಸಿದರು. ಶ್ರೀ ಅಣ್ಣು ಪೂಜಾರಿ, ಬೆಳ್ತಂಗಡಿ ವ್ಯ. ಸೇ ಸಂಘದ ನಿವೃತ್ತ ಕಾರ್ಯದರ್ಶಿಯಾದ ಶ್ರೀ ಗೋಪಾಲ್ ರಾವ್ ಉಪಸ್ಥಿತರಿದ್ದರು



**ಗ್ರಾಮದಲ್ಲಿ ವಿವೇಕ ಸಂಜೀವಿನಿ : 25.6.2023**

ಅಮ್ಟೂರು ಕೇಶವನಗರದ ಶಾರದಾಂಬ ಭಜನಾ ಮಂದಿರದಲ್ಲಿ ವಿವೇಕ ಸಂಜೀವಿನಿ ಎಂಬ ಔಷಧೀಯ ವನ ನಿರ್ಮಾಣಕ್ಕೆ ಔಷಧೀಯ ಗಿಡ ನೆಡುವ ಮೂಲಕ ಚಾಲನೆಯನ್ನು ನೀಡಲಾಯಿತು. ಸಹಸಂಚಾಲಕರು ಶ್ರೀ ರಮೇಶ್ ಎನ್. ಅಮ್ಟೂರು ಗ್ರಾಮ ವಿಕಾಸ ಸಮಿತಿ ಸದಸ್ಯರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



**ವಿಜ್ಞಾನ ಮಾದರಿ ಹಾಗೂ ಗಣಿತ ಮಾದರಿ ಪ್ರದರ್ಶನ :1.7.2023**

ವಿಜ್ಞಾನ ಮಾದರಿ ಪ್ರದರ್ಶನವನ್ನು ಶಿಶುವರ್ಗದವರಿಗೆ ದಧೀಚಿ ತರಗತಿಯಲ್ಲಿ, ಬಾಲವರ್ಗದವರಿಗೆ ಕೌಸಲ್ಯ ತರತಿಯಲ್ಲಿ ಹಾಗೂ ಗಣಿತ ಮಾದರಿ ಪ್ರದರ್ಶನವನ್ನು ವಿಜ್ಞಾನ ಪ್ರಯೋಗಾಲಯದಲ್ಲಿ ಹಮ್ಮಿಕೊಳ್ಳಲಾಯಿತು.



**ವಿವಿಧ ಕಲಾಪ್ರಕಾರಗಳ ಉದ್ಘಾಟನೆ**

ಚಿತ್ರಕಲೆ, ಸಂಗೀತ, ತಬಲ, ಹಾರ್ಮೋನಿಯಂ, ಭರತನಾಟ್ಯ, ಯಕ್ಷಗಾನ, ಕರಾಟೆ ತರಗತಿಗಳ ಆರಂಭೋತ್ಸವ ನಡೆಯಿತು. ಸುಮಾರು 300ಕ್ಕೂ ಹೆಚ್ಚು ಆಸಕ್ತ ವಿದ್ಯಾರ್ಥಿಗಳು ಈ ತರಬೇತಿಯನ್ನು ಪಡೆದುಕೊಳ್ಳುತ್ತಿದ್ದಾರೆ.

## ಸುಭಾಷಿತ ಮಂಜರಿ

**ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ**
**ಚಿತ್ತದೊಳು ಬೆಳೆದರಿವು ತರು ತಳೆದ ಪುಷ್ಪ**
**ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ**
**ಶಾಸ್ತ್ರತನದಿಂದಲ್ಲ–ಮಂಕುತಿಮ್ಮ**

**ಪುಸ್ತಕದ ಓದಿನಿಂದ ಪಡೆದ ಅನುಭವವು ತಲೆಯ ಮೇಲೆ ಧರಿಸಿದ ರತ್ನದಂತೆ. ಚಿತ್ತದೊಳಗೆ ಬೆಳೆದ ಅರಿವು ಗಿಡವು ತಳೆದ ಹೂವಿನ ಹಾಗೆ. ವಸ್ತುವೊಂದರ ಸಾಕ್ಷಾತ್ಕರವು ಅಂತರಂಗದ ಮೂಲಕ ಕಾಣುವುದೇ ಹೊರತು ಪಾಂಡಿತ್ಯದಿಂದ ಅಲ್ಲ ಎನ್ನುತ್ತದೆ ಈ ಕಗ್ಗ.**

### ಸಂಪಾದಕೀಯ

**ಆತ್ಮೀಯ ಓದುಗರೇ,**

**ಎಲ್ಲಾ ವಿಭಾಗಗಳಲ್ಲಿ ಶಾಲಾರಂಭದ ಚಟುವಟಿಕೆ ನಡೆಯುತ್ತಿದ್ದರೆ, ಪದವಿ ವಿಭಾಗದಲ್ಲಿ ವರ್ಷಾಂತ್ಯದ ಕಾರ್ಯಕ್ರಮಗಳ ಮೂಲಕ ಈ ಬಾರಿಯ ಸರಯೂ ನಿಮ್ಮ ಮುಂದೆ ಇದೆ. ಈ ವರ್ಷದ ವಾರ್ಷಿಕ ಯೋಜನೆಯಂತೆ ಪ್ರತಿ ವಿದ್ಯಾರ್ಥಿಯು ತನ್ನ ಮನೆ ಸುತ್ತಮುತ್ತ ಕನಿಷ್ಠ 3–5 ಆಯುರ್ವೇದಿಯ ಗುಣಗಳಿರುವ ಗಿಡಗಳನ್ನು ನೆಟ್ಟು ಬೆಳೆಸಬೇಕೆಂಬ ಯೋಜನೆ ಹಾಕಿಕೊಳ್ಳಲಾಗಿದೆ. ಹಾಗೂ ಶಾಲೆಗಳು ದತ್ತು ಪಡೆದುಕೊಂಡಿರುವ ಗ್ರಾಮಗಳಲ್ಲಿ ಔಷಧವನ ನಿರ್ಮಾಣ ಮಾಡುವ ಸಂಕಲ್ಪವಿದೆ. ಈಗಾಗಲೇ ಇದಕ್ಕೆ ತರಬೇತಿಯನ್ನು ನೀಡಲಾಗಿದ್ದು ಇವುಗಳ ವರದಿ ಈ ಸಂಚಿಕೆಯಲ್ಲಿದೆ. ಜೊತೆಗೆ ರಾಷ್ಟ್ರೀಯ ವಿಚಾರ ಸಂಕಿರಣ, ಪ್ರಶಸ್ತಿ ಪಡೆದ ಸಾಧನೆಗಳು, ತರಬೇತಿಗಳು, ಯೋಗದಿನಾಚರಣೆ, ಪರಿಸರ ದಿನಾಚರಣೆ, ವಿದ್ಯಾರ್ಥಿ ಸಂಘಗಳ ವಿವರಗಳೊಂದಿಗೆ ಪತ್ರಿಕೆ ಪ್ರಕಟಗೊಂಡಿದೆ. ಎಂದಿನಂತೆ ಓದಿ ಪ್ರತಿಕ್ರಿಯೆ ನೀಡಿ.**

**ವಂದನೆಗಳೊಂದಿಗೆ**

**ಸಂಪಾದಕ ಬಳಗ**


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಪ್ರೀತಿಕಾ (ಶಿಶುಮಂದಿರ)
ಚೈತ್ರ (ಪ್ರಾಥಮಿಕ ಶಾಲೆ)
ರಾಜೇಶ್ವರಿ (ಪ್ರೌಢಶಾಲೆ)
ರಮ್ಯ (ಸೆಕೆಂಡರಿ ಸ್ಕೂಲ್)
ರಮೇಶ್ (ಪಿಯುಸಿ)
ಪ್ರಸನ್ನಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಮೂರು


**ನಾಗತಂಬಿಲ : 2.6.2023**

ವಿದ್ಯಾಕೇಂದ್ರಕ್ಕೆ ಸಂಬಂಧಿಸಿದ, ಶಾಲಾ ವಠಾರದಲ್ಲಿರುವ ನಾಗಬನಕ್ಕೆ ವಾರ್ಷಿಕವಾಗಿ ನಡೆಯುವ ತಂಬಿಲ ಸೇವೆಯು ನಡೆಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಹಿರಿಯರಾದ ಡಾ ಪ್ರಭಾಕರ್ ಭಟ್ ಕಲ್ಲಡ್ಕ, ಶ್ರೀ ನಾರಾಯಣ ಸೋಮಯಾಜಿ, ಶ್ರೀ ವಸಂತ ಮಾಧವ ಹಾಗೂ ಎಲ್ಲಾ ವಿಭಾಗದ ಪ್ರಮುಖರು ಮತ್ತು ಅಧ್ಯಾಪಕ ವೃಂದದವರು ಉಪಸ್ಥಿತರಿದ್ದರು.

**ಹಿಂದೂ ಸಾಮ್ರಾಜ್ಯೋತ್ಸವ : 3.6.2023**

ಹಿಂದವಿ ಸಾಮ್ರಾಜ್ಯದ ಸ್ಥಾಪಕರಾದ ಶಿವಾಜಿ ಮಹಾರಾಜರ ಪಟ್ಟಾಭಿಷೇಕದ ದಿನವನ್ನು ಹಿಂದೂ ಸಾಮ್ರಾಜ್ಯೋತ್ಸವ ದಿನವನ್ನಾಗಿ ಆಚರಿಸಲಾಯಿತು. ಅಧ್ಯಾಪಕರಾದ ಶ್ರೀ ಜಿನ್ನಪ್ಪ ಶ್ರೀಮಾನ್ ಕಾರ್ಯಕ್ರಮದ ಮಹತ್ವನವನು ತಿಳಿಸಿಕೊಟ್ಟರು.

**ವಿಶ್ವ ಪರಿಸರ ದಿನಾಚರಣೆ : 5.6.2023**

ವಿಶ್ವ ಪರಿಸರ ದಿನಾಚರಣೆಯಲ್ಲಿ ಶ್ರೀ ಬಾಲಕೃಷ್ಣ ಶ್ರೀಮಾನ್ ಕಾರ್ಯಕ್ರಮದ ಬಗ್ಗೆ ಮಾತನಾಡಿದರು.

**ತರಬೇತುದಾರರ ತರಬೇತಿ ಶಿಬಿರ : 5.6.2023**

ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ, ಪುತ್ತೂರು ಇಲ್ಲಿ ನಡೆದ "ವಿವೇಕ ಸಂಜೀವಿನಿ" ತರಬೇತುದಾರರ ತರಬೇತಿ ಶಿಬಿರದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಶ್ರೀಮತಿ ಚೈತ್ರ ಎನ್ ಕೆ, ಶ್ರೀಮತಿ ಪ್ರೀತಾ, ಶ್ರೀಮತಿ ಅನುರಾಧ, ಶ್ರೀಮತಿ ಶ್ವೇತಾ, ಶ್ರೀಮತಿ ದಿವ್ಯ ಕೆ, ಕು. ಪ್ರತೀಕ್ಷಾ ಹಾಗೂ ಶ್ರೀ ಸುಮಂತ್ ಆಳ್ವ ಭಾಗವಹಿಸಿದರು.

**ಹೆಣ್ಣು ಮಕ್ಕಳ ಸುರಕ್ಷಾ ಸಪ್ತಾಹ : 7.6.2023**

5,6 ಮತ್ತು 7 ನೇ ತರಗತಿಯ ವಿದ್ಯಾರ್ಥಿನಿಯರಿಗೆ ಆರೋಗ್ಯ, ಸ್ವಚ್ಛತೆ ಹಾಗೂ ನಡವಳಿಕೆಯ ಕುರಿತು ಅಧ್ಯಾಪಕರಾದ ಶ್ರೀಮತಿ ರಾಜೇಶ್ವರಿ ಹಾಗೂ ಶ್ರೀಮತಿ ಅನ್ನಪೂರ್ಣ ಎನ್ ಭಟ್ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ತರಗತಿ ಅಧ್ಯಾಪಕರು ಉಪಸ್ಥಿತರಿದ್ದರು.

**ಜೂನ್ 9 ರಿಂದ 11 : ವಿಜ್ಞಾನ ಕಾರ್ಯಾಗಾರದಲ್ಲಿ ಭಾಗಿ**

3ದಿನಗಳ ಕಾಲ ಜೆ.ಜಿ ರಾಷ್ಟ್ರೋತ್ಥಾನ ವಿದ್ಯಾಲಯ, ಬೆಂಗಳೂರು ಇಲ್ಲಿ ನಡೆದ ವಿಜ್ಞಾನ ಮತ್ತು ಗಣಿತ ಶಿಕ್ಷಕರ ಪ್ರಾಂತೀಯ ವರ್ಗದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಶ್ರೀಮತಿ ರಾಜೇಶ್ವರಿ ಎಂ, ಕು. ಪೂರ್ಣಿಮಾ ಮತ್ತು ಶ್ರೀ ಬಾಲಕೃಷ್ಣ ಭಾಗವಹಿಸಿದರು.

**ವಿಶ್ವ ರಕ್ತದಾನಿಗಳ ದಿನಾಚರಣೆ: 14.6.2023**

ರಕ್ತದಾನದ ಮಹತ್ವವನ್ನು 7ನೇ ತರಗತಿಯ ವೈಷ್ಣವಿ ಕಡ್ಯ ತಿಳಿಸಿಕೊಟ್ಟರು. ಕಾರ್ಯಕ್ರಮವನ್ನು ವಿಜ್ಞಾನ ಶಿಕ್ಷಕರಾದ ಕು. ಜ್ಯೋತಿಶ್ರೀ ಸಿ ಎಂ, ಶ್ರೀಮತಿ ರಮ್ಯ ಜೆ ಹಾಗೂ ಕು. ಪೂರ್ಣಿಮಾ ಇವರು ನಡೆಸಿಕೊಟ್ಟರು. ಕಾರ್ಯಕ್ರಮವನ್ನು ವಿದ್ಯಾರ್ಥಿಯಾದ ಶರಣ್ಯ ನಿರೂಪಿಸಿ, ವಂದಿಸಿದರು.

**ಔಷಧಿ ಗಿಡಗಳ ಗಿಡ ನೆಡುವಿಕೆ : 19.6.2023**

ವಿವೇಕ ಸಂಜೀವಿನಿಯ ಶಾಲಾ ಅನುಷ್ಠಾನದ ಭಾಗವಾಗಿ ಔಷಧೀ ಗಿಡಗಳ ಗಿಡ ನೆಡುವಿಕೆ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಸಣ್ಣ ಚೀಲದಲ್ಲಿ ಮಣ್ಣು ತುಂಬಿ ಗಿಡ ನೆಟ್ಟು ಪೋಷಿಸಿದರು.

**ವಿಚಾರ ಸಂಕಿರಣದಲ್ಲಿ ಭಾಗಿ :20.6.2023**

ಶ್ರೀರಾಮ ಪದವಿ ಮಹಾವಿದ್ಯಾಲಯದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯರು ಸೇರಿದಂತೆ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಭಾಗವಹಿಸಿದರು.

**ವಿಶ್ವಯೋಗ ದಿನಾಚರಣೆ : 21.6.2023**

ವಿಶ್ವಯೋಗ ದಿನದ ಮಹತ್ವವನ್ನು ಅಧ್ಯಾಪಕರಾದ ಶ್ರೀಮತಿ ರಾಜೇಶ್ವರಿ ಎಂ ತಿಳಿಸಿಕೊಟ್ಟರು. ನಂತರ ಕಛೇರಿ ಸಹಾಯಕರಾದ ಶ್ರೀ ಸುಧೀಂದ್ರ ಇವರು ತರಗತಿವಾರು ವಿದ್ಯಾರ್ಥಿಗಳಿಗೆ ಸೂರ್ಯನಮಸ್ಕಾರ ಹೇಳಿಕೊಟ್ಟರು. ಎಲ್ಲಾ ವಿದ್ಯಾರ್ಥಿಗಳು ಅನುಸರಿಸಿದರು. ವೇದಿಕೆಯಲ್ಲಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಸಾಲ್ಯಾನ್ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಮಾತೃಭಾರತಿ ಬೈಠಕ್ ಹಾಗೂ ಯೋಗಾಸನ : 21.6.2023**

2023–24 ಶೈಕ್ಷಣಿಕ ವರ್ಷದ ಮೊದಲ ಮಾತೃಭಾರತಿ ಬೈಠಕ್ ನಡೆಯಿತು. ಈ ಬೈಠಕ್‌ನಲ್ಲಿ ಪದಾಧಿಕಾರಿಗಳ ಆಯ್ಕೆ ನಡೆಯಿತು. ವಿಶ್ವ ಯೋಗ ದಿನದ ಅಂಗವಾಗಿ ಮಾತೆಯರಿಗೆ ಕೆಲವೊಂದು ಆಸನಗಳನ್ನು ಮಾಡಿಸಲಾಯಿತು. ಈ ಬೈಠಕ್‌ನಲ್ಲಿ ಸಂಚಾಲಕರಾದ ಶ್ರೀ ವಸಂತ ಮಾಧವ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಸ್ಥೆಯ ಹಿರಿಯರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರು ಶಾಲೆಯಲ್ಲಿ ಮಾತೃಭಾರತಿಯ ಪಾತ್ರ ಇದರ ಬಗ್ಗೆ ತಿಳಿಸಿಕೊಟ್ಟರು. ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಸಾಲ್ಯಾನ್ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಸಾಮೂಹಿಕ ಹುಟ್ಟುಹಬ್ಬ, ಭಜನೆ : 24.6.2023**

ಮಾಸಿಕ ಭಜನೆ ಹಾಗೂ ಎಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಹುಟ್ಟಿದ ಮಕ್ಕಳ ಹುಟ್ಟುಹಬ್ಬವನ್ನು ಸಾಮೂಹಿಕವಾಗಿ ಆಚರಿಸಲಾಯಿತು. ದಿನದ ಮಹತ್ವವನ್ನು ಅಧ್ಯಾಪಕರಾದ ಶ್ರೀಮತಿ ಅನ್ನಪೂರ್ಣ ಎನ್ ಭಟ್ ತಿಳಿಸಿಕೊಟ್ಟರು. ಹುಟ್ಟುಹಬ್ಬ ಆಚರಿಸಿದ ಮಕ್ಕಳಿಗೆ ಅಧ್ಯಾಪಕ ವೃಂದ ಆರತಿ, ಅಕ್ಷತೆ, ತಿಲಕಧಾರಣೆ ಮಾಡಿ, ಸಿಹಿ ನೀಡಿದರು. ವೇದಿಕೆಯಲ್ಲಿ ರವಿರಾಜ್ ಶ್ರೀಮಾನ್ ಉಪಸ್ಥಿತರಿದ್ದರು.

**ಶಾಲಾ ಸಂಸತ್ತು ಮತ್ತು ವಿವಿಧ ಸಂಘಗಳ ಉದ್ಘಾಟನೆ : 24.6.2023**

2023–24ನೇ ಶೈಕ್ಷಣಿಕ ವರ್ಷದ ಶಾಲಾ ಸಂಸತ್ತು ಹಾಗೂ ವಿವಿಧ ಸಂಘಗಳ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಸಂಸತ್ತಿನ ರಚನೆ ಹಾಗೂ ಮಹತ್ವದ ಕುರಿತು ಬಾಳ್ತಿಲ ಗ್ರಾಮ ಪಂಚಾಯತ್‌ನ ಸದಸ್ಯರಾದ ವಿಠ್ಠಲ್ ನಾಯಕ್ ತಿಳಿಸಿಕೊಟ್ಟರು.

ಸಭಾಪತಿಯಾಗಿ 7ನೇ ತರಗತಿಯ ವೈಷ್ಣವಿ ಕಡ್ಯ, ಶಾಲಾ ನಾಯಕಿಯಾಗಿ ವೈಷ್ಣವಿ ಕಾಮತ್, ಉಪನಾಯಕನಾಗಿ ಪ್ರಥಮ್, ಶಿಕ್ಷಣ ಮಂತ್ರಿಯಾಗಿ ಆದಿತ್ಯ ಹಾಗೂ ಭುವಿ, ಆರೋಗ್ಯ ಮಂತ್ರಿಯಾಗಿ ಧನ್ವಿತ್ ಎಸ್ ಹಾಗೂ ರಕ್ಷಾ, ಕೃಷಿ ಮಂತ್ರಿಯಾಗಿ ಸಂಜಯ್ ಹಾಗೂ ದಾಕ್ಷಾಯಿಣಿ, ನೀರಾವರಿ ಮಂತ್ರಿಯಾಗಿ ಕೃಪಾ ಮತ್ತು ದಿವೇಶ್, ಕ್ರೀಡಾ ಮಂತ್ರಿಯಾಗಿ ಗುರುನಂದನ್ ರೈ ಹಾಗೂ ಶ್ರೇಯಾ ಎಂ.ಜೆ, ಶಿಸ್ತು ಮತ್ತು ಸ್ವಚ್ಛತಾ ಮಂತ್ರಿಯಾಗಿ ಭವಿಷ್ ಅರಸ್ ಮತ್ತು ಧನ್ಯಶ್ರೀ, ಸಾಂಸ್ಕೃತಿಕ ಮಂತ್ರಿಯಾಗಿ ಜಯೇಶ್ ಮತ್ತು ರಿಷಿಕಾ, ವಾರ್ತಾ ಮಂತ್ರಿಯಾಗಿ ಸಂಕೀರ್ತ್ ಶೆಟ್ಟಿ ಮತ್ತು ದಿಶಾ ಜಿ ಪ್ರಮಾಣವಚನ ಸ್ವೀಕರಿಸಿದರು.

ವಿರೋಧಪಕ್ಷದ ನಾಯಕನಾಗಿ ಶ್ರೇಯಾಂಕ್ ಹಾಗೂ ಉಪನಾಯಕನಾಗಿ ಜಗನ್ ಆಯ್ಕೆಯಾಗಿದ್ದಾರೆ.

ವೇದಿಕೆಯಲ್ಲಿ ಬಾಳ್ತಿಲ ಗ್ರಾಮ ಪಂಚಾಯತ್‌ನ ಸದಸ್ಯರಾದ ಶ್ರೀ ಅಣ್ಣು ಪೂಜಾರಿ, ಬೆಳ್ತಂಗಡಿ ತಾಲೂಕಿನ ವ್ಯವಸಾಯಿಕ ಸೇವಾ ಸಂಘದ ನಿವೃತ್ತ ಕಾರ್ಯದರ್ಶಿಯಾದ ಶ್ರೀ ಗೋಪಾಲ್ ರಾವ್, ಶ್ರೀರಾಮ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಕುಲ್ಯಾರು ನಾರಾಯಣ ಶೆಟ್ಟಿ, ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಮಲ್ಲಿಕಾ ಶೆಟ್ಟಿ, ಮುಖ್ಯೋಪಾಧ್ಯಾಯರಾದ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಅಧ್ಯಾಪಕರ ಬೈಠಕ್ : 24.6.2023**

ದಧೀಚಿ ತರಗತಿಯಲ್ಲಿ ಅಧ್ಯಾಪಕರ ಅವಲೋಕನ ಬೈಠಕ್ ನಡೆಯಿತು. ಈ ಬೈಠಕ್‌ನಲ್ಲಿ ಪ್ರಾಥಮಿಕ ವಿಭಾಗದ ಶಾಲಾ ಶೈಕ್ಷಣಿಕ ಪರಿವೀಕ್ಷಕರಾದ ಶ್ರೀ ಚೆನ್ನಪ್ಪ ಆರ್ ಕೋಟ್ಯಾನ್ ಪರಿಹಾರ ಬೋಧನೆಯ ಕುರಿತು ಮಾಹಿತಿ ಸಂಗ್ರಹಿಸಿದರು. ಮುಖ್ಯೋಪಾಧ್ಯಾಯರು ಸೇರಿದಂತೆ ಎಲ್ಲಾ ಅಧ್ಯಾಪಕರು ಉಪಸ್ಥಿತರಿದ್ದರು.

**ಜೇನು ಕೃಷಿ ಮಾಹಿತಿ: 29.6.2023**



4ನೇ ತರಗತಿಯ ವಿದ್ಯಾರ್ಥಿಗಳಿಗೆ ಪಾಠಕ್ಕೆ ಸಂಬಂಧಿಸಿದಂತೆ ಜೇನುಕೃಷಿಯ ಕುರಿತು ಮಾಹಿತಿಯನ್ನು ಪ್ರಗತಿಪರ ಕೃಷಿಕರಾದ ಶ್ರೀ ರಾಕೋಡಿ ಈಶ್ವರ ಭಟ್ ತಿಳಿಸಿಕೊಟ್ಟರು. ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ತಾವು ತಂದಂತಹ ಶುದ್ಧ ಜೇನು ತುಪ್ಪವನ್ನು ಮಕ್ಕಳಿಗೆ ಸವಿಯಲು ನೀಡಿದರು. ಒಟ್ಟು 161 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

**ವಿವಿಧ ಕಲಾಪ್ರಕಾರಗಳ ಉದ್ಘಾಟನೆ**

**ಚಿತ್ರಕಲೆ ತರಬೇತಿ ಉದ್ಘಾಟನೆ : 3.6.2023**

ವಿವಿಧ ಕಲಾಪ್ರಕಾರಗಳಲ್ಲಿ ಒಂದಾದ ಚಿತ್ರಕಲೆ ತರಬೇತಿ ತರಗತಿಯು ಶ್ರೀರಾಮ ವಿದ್ಯಾಕೇಂದ್ರದ ಕೋಶಾಧಿಕಾರಿಯಾದ ಶ್ರೀ ಸತೀಶ್ ಶಿವಗಿರಿ ಇವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಚಿತ್ರಕಲೆ ತರಬೇತಿದಾರರಾದ ಟಿಲೇಶ್ ಹಾಗೂ ವಿಭಾಗ ಮುಖ್ಯಸ್ಥರು ಉಪಸ್ಥಿತರಿದ್ದರು.

**ಸಂಗೀತ ತರಗತಿ ಉದ್ಘಾಟನೆ : 10.6.2023**

ಶಂಭೂರಿನ ವಿದ್ವಾನ್ ಕೃಷ್ಣಾಚಾರ್ಯರು ಸಂಗೀತ ತರಬೇತುದಾರಾಗಿದ್ದು, ಒಟ್ಟು 43 ವಿದ್ಯಾರ್ಥಿಗಳು ಸಂಗೀತ ತರಬೇತಿಯನ್ನು ಪಡೆದುಕೊಳ್ಳುತ್ತಿದ್ದಾರೆ.

**ಕರಾಟೆ ತರಗತಿ ಉದ್ಘಾಟನೆ : 10.6.2023**



ಕರಾಟೆ ತರಗತಿ ಉದ್ಘಾಟನೆಗೊಂಡಿತು. ಕರಾಟೆ ಪಟು ಶ್ರೀ ರಾಜೇಶ್ ಇವರು ಕರಾಟೆ ತರಬೇತುದಾರರಾಗಿದ್ದು, ಒಟ್ಟು 42 ವಿದ್ಯಾರ್ಥಿಗಳು ಈ ತರಬೇತಿಯಲ್ಲಿ ಭಾಗವಹಿಸುತ್ತಾರೆ.

**ತಬಲ ತರಗತಿ ಆರಂಭ : 24.6.2023**

ತಬಲ ತರಗತಿಯ ತರಬೇತುದಾರರಾಗಿ ಶ್ರೀ ಸೀತಾರಾಮ ಹೊಳ್ಳ ಭಾಗವಹಿಸಿದರು. ಒಟ್ಟು 14 ವಿದ್ಯಾರ್ಥಿಗಳು ಈ ತರಬೇತಿಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

**ಯಕ್ಷಗಾನ ತರಗತಿ ಉದ್ಘಾಟನೆ : 24.6.2023**



ಯಕ್ಷಗಾನ ತರಬೇತಿ ಶಿಬಿರವು ತರಬೇತುದಾರರಾದ ಶ್ರೀ ಗಣೇಶ್ ಆಚಾರ್ಯ ಕೊಂದಲಕೋಡಿ ಇವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಒಟ್ಟು 60 ವಿದ್ಯಾರ್ಥಿಗಳು ಈ ತರಬೇತಿ ಪಡೆಯುತ್ತಿದ್ದಾರೆ.

**ಭರತನಾಟ್ಯ ತರಗತಿ ಉದ್ಘಾಟನೆ :29.6.2023**

ಮೂಕಾಂಬಿಕ ನಾಟ್ಯಲಯದ ವಿದ್ವಾನ್ ಗಿರೀಶ್ ಇವರು ತರಬೇತುದಾರರಾಗಿದ್ದಾರೆ. ಈ ಉದ್ಘಾಟನಾ ಸಂದರ್ಭದಲ್ಲಿ ತರಬೇತಿ ಪಡೆಯುವ 90 ವಿದ್ಯಾರ್ಥಿಗಳು ಹಾಗೂ ಪೋಷಕರು ಭಾಗವಹಿಸಿದ್ದರು.

**ಗಣಿತ – ವಿಜ್ಞಾನ ಸ್ಪರ್ಧೆಗಳು :**

**ವಿಜ್ಞಾನ ಪ್ರಯೋಗ ಸ್ಪರ್ಧೆ : 26.6.2023**

24.6.2023 ರಂದು ಶಾಲಾ ಮಟ್ಟದಲ್ಲಿ ಶಿಶು ವರ್ಗ ಹಾಗೂ ಬಾಲ ವರ್ಗದವರಿಗೆ ವಿಜ್ಞಾನ ಪ್ರಯೋಗ ಸ್ಪರ್ಧೆಯು ವಿಜ್ಞಾನ ಪ್ರಯೋಗಾಲಯದಲ್ಲಿ ನಡೆಯಿತು.

**ವಿಜ್ಞಾನ ರಸಪ್ರಶ್ನೆ ಸ್ಪರ್ಧೆ : 24.6.2023**



ಜ್ಞಾನ ವಿಜ್ಞಾನ ಮೇಳದ ಅಂಗವಾಗಿ ಶಾಲಾ ಮಟ್ಟದಲ್ಲಿ ಶಿಶು ವರ್ಗ ಹಾಗೂ ಬಾಲ ವರ್ಗದವರಿಗೆ ವಿಜ್ಞಾನ ರಸಪ್ರಶ್ನೆ ಸ್ಪರ್ಧೆ ನಡೆಯಿತು.

**ಶಾಲಾ ಸಂಸತ್ತಿನ ಚುನಾವಣೆ 24.06.2023**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಶಾಲಾ ಸಂಸತ್ತಿನ ಚುನಾವಣೆಯು ನಡೆಯಿತು. ಮೊಬೈಲ್‌ನಲ್ಲಿ ವೋಟಿಂಗ್ ಮಾಡುವುದರ ಮೂಲಕ ಮತದಾನ ನಡೆಸಲಾಯಿತು. ಚುನಾವಣಾ ಅಧಿಕಾರಿಯಾಗಿ ದೈಹಿಕ ಶಿಕ್ಷಣ ಶಿಕ್ಷಕಿ ಶ್ರೀಮತಿ ಹರ್ಷಿತ ಮಾತಾಜಿ ಇವರು ಕಾರ್ಯನಿರ್ವಹಿಸಿದರು.

**ಸರಸ್ವತಿ ವಂದನಾ ಅಭ್ಯಾಸ 26.06.2023**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನಲ್ಲಿ ಹೊಸದಾಗಿ ಸೇರ್ಪಡೆಗೊಂಡ 9ನೇ ತರಗತಿಯ ವಿದ್ಯಾರ್ಥಿಗಳಿಗೆ ಪದವಿ ವಿಭಾಗದ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ಶ್ರೀಮಾನ್‌ರವರು ಸರಸ್ವತಿ ವಂದನಾ ಅಭ್ಯಾಸವನ್ನು ಮಾಡಿಸಿದರು.

## ಪ್ರೌಢಶಾಲೆ

**ಹಿಂದೂ ಸಾಮ್ರಾಜ್ಯ ದಿನೋತ್ಸವ 2/06/2023**




ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿ, ರಾಷ್ಟ್ರೀಯ ಸ್ವಯಂಸೇವಕ ಸಂಘ ಮಂಗಳೂರು ಗ್ರಾಮಾಂತರ ಜಿಲ್ಲೆಯ ಸಹ ಶಾರೀರಿಕ ಪ್ರಮುಖರಾದ ಶ್ರೀ ಗಣೇಶ ಇವರು ದೀಪ ಪ್ರಜ್ವಲನೆ ಮಾಡಿ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಿದರು. “ಶಿವಾಜಿಯ ಜೀವನ ಚರಿತ್ರೆಯನ್ನು ಸವಿಸ್ತಾರವಾಗಿ ವಿವರಿಸುತ್ತಾ ಸೇವೇ ಮತ್ತು ಸಮರ್ಪಣಾ ಭಾವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರಾದ, ಶ್ರೀ ಗೋಪಾಲ ಎಂ ಉಪಸ್ಥಿತರಿದ್ದರು.

**ಸಂಸ್ಕೃತ ಸಂಭಾಷಣಾ ಶಿಬಿರ ಉದ್ಘಾಟನೆ ಕಾರ್ಯಕ್ರಮ 7.6.2023**

ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ದೀಪ ಪ್ರಜ್ವಲಿಸುವ ಮೂಲಕ ಉದ್ಘಾಟಿಸಿದರು. ನಾವೆಲ್ಲರೂ ಸಂಸ್ಕೃತ ಭಾಷೆಯ ಮಹತ್ವವನ್ನು ಅರಿತಿರಬೇಕು, ಸಂಸ್ಕೃತ ಭಾಷೆ ದೇವರು ಮಾತನಾಡುವ ಭಾಷೆಯಾಗಿದ್ದು ಈ ಕಾರಣದಿಂದ ನಾವು ಈ ಭಾಷೆಯಲ್ಲಿ ಸಂಭಾಷಣೆಯನ್ನು ಮಾಡಬೇಕು ಎಂದರು. ಕಾರ್ಯಕ್ರಮವನ್ನು ಗೌತಮ್ ಭಾರದ್ವಾಜ್ ನಿರೂಪಿಸಿ, ಗಗನ್ ಸ್ವಾಗತಿಸಿ, ಜಯರಾಮ್ ಶ್ರೀಮಾನ್ ವಂದಿಸಿದರು.

**ಸಾಂಸ್ಕೃತಿಕ ಭಾರತ ಪ್ರವಚನ ಮಾಲಿಕೆ 10.6.23**

ಸಾಂಸ್ಕೃತಿಕ ಭರತ ಪ್ರವಚನ ಮಾಲಿಕೆಯನ್ನು ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಕೃಷ್ಣಪ್ರಸಾದ್ ಶ್ರೀಮಾನ್ ಇವರು ನಡೆಸಿಕೊಟ್ಟರು. ವೇದಿಕೆಯಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಶ್ರೀಮಾನ್ ಉಪಸ್ಥಿತರಿದ್ದರು. ಶ್ರೀ ಕೊಟ್ರೇಶ್ ಶ್ರೀಮಾನ್ ನಿರೂಪಿಸಿ, ವಿದ್ಯಾರ್ಥಿನಿ ವೈದೇಹಿ ಸ್ವಾಗತಿಸಿ, ಪ್ರೇಕ್ಷಾ ವಂದಿಸಿದಳು.

**17/06/2023** ರಂದು ಸಾಂಸ್ಕೃತಿಕ ಭಾರತದ ಪ್ರವಚನ ಮಾಲಿಕೆಯ ಅಂಗವಾಗಿ ‘ಪುಣ್ಯಭೂಮಿ ಭಾರತ’ ಈ ವಿಷಯದ ಬಗ್ಗೆ ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ್ ಎಂ ಇವರಿಂದ ಉಪನ್ಯಾಸ ಜರುಗಿತು.

**ಅಂತರಾಷ್ಟ್ರೀಯ ಯೋಗ ದಿನಾಚರಣೆ 21.6.23**

ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಇವರು ದೀಪ ಪ್ರಜ್ವಲನೆ ಮಾಡುವ ಮೂಲಕ ಉದ್ಘಾಟಿಸಿದರು.ಇದೇ ಸಂದರ್ಭದಲ್ಲಿ ಅಧ್ಯಕ್ಷ ಭಾಷಣವನ್ನು ಮಾಡಿದ ಅವರು ತಮ್ಮ ನುಡಿಗಳಲ್ಲಿ ‘ಯೋಗವು ನಮ್ಮ ದೇಹವನ್ನು ಸದಾ ಕ್ರಿಯಾಶೀಲತೆಯಿಂದ ಇರುವಂತೆ ನೋಡಿಕೊಳ್ಳುತ್ತದೆ. ಇದರೊಂದಿಗೆ ಪರಿಸರ ಸ್ವಚ್ಛವಾಗಿರಬೇಕು, ಮನಸ್ಸು ಶುದ್ಧವಾಗಿರಬೇಕು. ಇದನ್ನು ಜೀವನದಲ್ಲಿ ಸದಾ ಅಳವಡಿಸಿಕೊಳ್ಳಬೇಕು ಮತ್ತು ಆರೋಗ್ಯವಂತರಾಗಿರಬೇಕು ಎಂದು ಶುಭ ಹಾರೈಸಿದರು.

ಇನ್ನೋರ್ವ ಅತಿಥಿ ಶ್ರೀ ಪ್ರವೀಣ್ ವಡೆಯಾರ್ "ಅಷ್ಟಾಂಗ ಯೋಗದಲ್ಲಿ ಒಂದನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳೋಣ, ಯೋಗ ಬರೀ ಯೋಗ ದಿನಕ್ಕೆ ಸೀಮಿತವಾಗದೆ ಜೀವನದಲ್ಲಿ ಸದಾ ಅಳವಡಿಸಿಕೊಂಡು ಮುನ್ನಡೆಯೋಣ" ಎಂದು ಕಿವಿ ಮಾತು ಹೇಳಿದರು. ಇದೇ ವೇಳೆ ದೈಹಿಕ ಶಿಕ್ಷಕರಾದ ಪುರುಷೋತ್ತಮ ಶ್ರೀಮಾನ್ ಇವರು ವಿದ್ಯಾರ್ಥಿಗಳಿಗೆ ಯೋಗ ಪ್ರಾತ್ಯಕ್ಷಿಕೆಯನ್ನು ನಡೆಸಿಕೊಟರು. ಇದೇ ವೇಳೆ ಯೋಗ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ವೇದಿಕೆಯಲ್ಲಿ ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಗೋಪಾಲ್ ಎಂ, ಶ್ರೀರಾಮ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿ ಹಾಗೂ ಯೋಗಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾದ ಉಮೇಶ್.ಎಂ ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಎನ್.ಸಿ.ಸಿ, ಸ್ಕೌಟ್ ಗೈಡ್ ವಿದ್ಯಾರ್ಥಿಗಳು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ಶ್ರೀಮಾನ್ ಮಾತಾಜಿಗಳು ಉಪಸ್ಥಿತರಿದ್ದರು. ವಿದ್ಯಾರ್ಥಿಯಾದ ಭೂಷಣ್ ನಿರೂಪಿಸಿದನು. ಶ್ರದ್ಧಾ ಸ್ವಾಗತಿಸಿ, ಮೇಘಶ್ರೀ ವಂದಿಸಿದಳು.

**ಬೀಜಾರೋಪಣ ಹಾಗೂ ಔಷಧಿ ಸಸಿಗಳ ಪೋಷಣ ಹಬ್ಬ 23.6.23**

ವಿವೇಕ ಸಂಜೀವಿನಿ ಯೋಜನೆಯ ಕಾರ್ಯಕ್ರಮ “ಬೀಜಾರೋಪಣ ಮತ್ತು ಔಷಧಿ ಸಸಿಗಳ ಪೋಷಣ ಹಬ್ಬ” ಕಾರ್ಯಕ್ರಮವನ್ನು ಬಾಳ್ತಿಲ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಹಿರಣ್ಮಯಿ ಉದ್ಘಾಟಿಸಿದರು. ವೇದಿಕೆಯಲ್ಲಿ ರೈತರ ಸೇವಾ ಸಹಕಾರಿ ಸಂಘ ಕಲ್ಲಡ್ಕ ಇದರ ನಿರ್ದೇಶಕರು ಹಾಗೂ ಗಣೇಶ್ ಟೆಕ್ಸ್ ಟೈಲ್ಸ್ ಇದರ ಮಾಲಕರಾಗಿರುವ ಪೂವಪ್ಪ ಟೈಲರ್, ಶ್ರೀರಾಮ ಪ್ರೌಢಶಾಲೆಯ ಹಿರಿಯ ವಿದ್ಯಾರ್ಥಿ ಹಾಗೂ ಕೆ.ಎಸ್.ಆರ್.ಟಿ.ಸಿ ಉದ್ಯೋಗಿ ಶ್ರೀ ದಯಾನಂದ ಗೋಳಮಜಲ್, ಪ್ರಗತಿಪರ ಕೃಷಿಕರಾಗಿರುವ ಶ್ರೀಯುತ ಗಿಳ್ಕಿಂಜ ಕೃಷ್ಣ ಭಟ್, ಹಾಗೂ ಮುಖ್ಯೋಪಾಧ್ಯಾಯರು ಶ್ರೀ ಗೋಪಾಲ್ ಎಂ ಉಪಸ್ಥಿತರಿದ್ದರು. ಪ್ರೌಢಶಾಲೆಯ ಎಲ್ಲಾ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ವಿದ್ಯಾರ್ಥಿನಿಯಾದ ರಕ್ಷಿತಾ ನಿರೂಪಿಸಿದಳು, ಅನುಷಾ ಸ್ವಾಗತಿಸಿ, ರಕ್ಷಿತ ವಂದಿಸಿದಳು.

**ಸಾಂಸ್ಕೃತಿಕ ಭಾರತ ಪ್ರವಚನ ಮಾಲಿಕೆ ಆವೃತ್ತಿ 2–ಚತುರ್ಧಾಮಗಳು 24/6/2023**

ಸಾಂಸ್ಕೃತಿಕ ಭಾರತ ಪ್ರವಚನ ಮಾಲಿಕೆ ಅಂಗವಾಗಿ ಪ್ರೌಢಶಾಲೆಯ ಅಧ್ಯಾಪಕರಾದ ಪ್ರಶಾಂತ್ ಎನ್ ಎಂ ಇವರು ಚತುರ್ಧಾಮಗಳ ಬಗ್ಗೆ ಉಪನ್ಯಾಸವಿತ್ತರು.

## ಪದವಿಪೂರ್ವ

**ವಿಶ್ವ ಪರಿಸರ ದಿನಾಚರಣೆ**

ದಿನಾಂಕ 05/06/2023 ರಂದು ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿವೇಕಾನಂದ ವಿದ್ಯಾವರ್ಧಕ ಸಂಘದ ವತಿಯಿಂದ ಔಷಧೀಯ ಸಸ್ಯಗಳ ಸಂರಕ್ಷಣೆ ಸಂವರ್ಧನೆ ಪರಿಸರ ರಕ್ಷಣೆ ಇಡೀ ಜೀವರಾಶಿಗಳಿಗೆ ಅದರಿಂದಾಗುವ ಪ್ರಯೋಜನಗಳ ಬಗ್ಗೆ ಅರಿವು ಮೂಡಿಸುವ ವಿವೇಕ ಸಂಜೀವಿನಿ ಕಾರ್ಯಕ್ರಮದಲ್ಲಿ ಶ್ರೀರಾಮ ಪದವಿ ಪೂರ್ವ ಕಾಲೇಜಿನ ವತಿಯಿಂದ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಲ ಶ್ರೀಮಾನ್ ಮತ್ತು ಉಪನ್ಯಾಸಕರಾದ ಶ್ರೀಮತಿ ಶೈಲಿನಿ ಮಾತಾಜಿ ಶ್ರೀಮತಿ ಮಧು ಶ್ರೀ ಮಾತಾಜಿ ಅಶೋಕ್ ಶ್ರೀಮಾನ್ ರಮೇಶ್ ಶ್ರೀಮಾನ್ ಭಾಗವಹಿಸಿದ್ದರು.

**ಮತದಾನ** 17.06.2023

ವಿದ್ಯಾರ್ಥಿಗಳಲ್ಲಿ ಮತದಾನದ ಜಾಗೃತಿಯನ್ನು ಮೂಡಿಸುವ ಸಲುವಾಗಿ ಪ್ರಸಕ್ತ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘಕ್ಕೆ ಅಧ್ಯಕ್ಷ

ಕಾರ್ಯದರ್ಶಿ ಮತ್ತು ಜೊತೆ ಕಾರ್ಯದರ್ಶಿ ಸ್ಥಾನಕ್ಕೆ ಚುನಾವಣೆ ನಡೆಯಿತು ಮತದಾನದ ಪ್ರಕ್ರಿಯೆಯಲ್ಲಿ ಪದವಿ ಪೂರ್ವ ವಿಭಾಗದ ಎಲ್ಲಾ ಶ್ರೀಮಾನ್ ಮಾತಾಜಿಗಳು ಹಾಗೂ ಚುನಾವಣೆ ಅಧಿಕಾರಿಯಾಗಿ ಶ್ರೀಮತಿ ಶೋಭಾ ಮಾತಾಜಿ ಕಾರ್ಯನಿರ್ವಹಿಸಿದರು.

**ಯೋಗಭ್ಯಾಸ 19.6.2023**

ಉಪನ್ಯಾಸಕರಿಗೆ ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಯೋಗ ಪ್ರಮುಖ್ ಚಂದ್ರಶೇಖರ್ ಶ್ರೀಮಾನ್ ಯೋಗಭ್ಯಾಸ ಹಾಗೂ ಯೋಗದಿಂದ ಆಗುವ ಪ್ರಯೋಜನಗಳನ್ನು ತಿಳಿಸಿದರು.

**ವಿಶ್ವ ಯೋಗ ದಿನಾಚರಣೆ 21.6.2023**

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಯೋಗಪರಿವೀಕ್ಷಕರಾದ ಶ್ರೀ ಸಂಜಯ್ ರವರು ಯೋಗ ಅಭ್ಯಾಸವನ್ನು ನಡೆಸಿಕೊಟ್ಟು ಯೋಗದ ಮಹತ್ವವನ್ನು ವಿದ್ಯಾರ್ಥಿಗಳಿಗೆ ತಿಳಿಸಿದರು. ದೈ.ಶಿ. ನಿರ್ದೇಶಕರಾದ ಶ್ರೀ ಕರುಣಾಕರ್ ಕಾರ್ಯಕ್ರಮ ನಿರ್ವಹಿಸಿದರು.

**ಕರಾಟೆ ತರಗತಿ ಆರಂಭ**

23.6.2023 ರಂದು ಶ್ರೀರಾಮ ಪದವಿ ಪೂರ್ವ ಕಾಲೇಜಿನಲ್ಲಿ ಕರಾಟೆ ತರಗತಿಯು ಆರಂಭಗೊಂಡಿತು.

**ಎಟಿಎಲ್ ಕಾರ್ಯಾಗಾರ** 30.6.2023

ಅಜಿತ ಕುಮಾರ ಸಭಾ ಭವನದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಎಟಿಎಲ್ ಪ್ರಯೋಗಾಲಯಗಳ ಒಂದು ದಿನದ ಕಾರ್ಯಾಗಾರ ನಡೆಯಿತು. ಮಂಗಳೂರು ಡಯಟ್ ಸಂಸ್ಥೆಯ ಜಿಲ್ಲಾ ಎಟಿಎಲ್ ನೋಡಲ್ ಅಧಿಕಾರಿ ಶ್ರೀಮತಿ ವೇದಾವತಿ ದೀಪ ಬೆಳಗಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅಧ್ಯಕ್ಷತೆ ವಹಿಸಿದ್ದರು. ಹೊಸ ತಂತ್ರಜ್ಞಾನಗಳನ್ನು ಬಳಸುವ ಮೂಲಕ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಸಾಧನೆ ಮಾಡುವಂತೆ ಪ್ರೇರೇಪಿಸಿದರು. ಕಾರ್ಯಕ್ರಮದ ಅತಿಥಿಯಾಗಿ ಬಂಟ್ವಾಳ ಬಿಇಒ ಶ್ರೀ ಜ್ಞಾನೇಶ್ ಆಗಮಿಸಿ, ಹೊಸ ತಂತ್ರಜ್ಞಾನಗಳನ್ನು ಆಸಕ್ತಿಯಿಂದ ಕಲಿತು ವಿಜ್ಞಾನ ಮತ್ತು ತಾಂತ್ರಿಕ ಮಾದರಿಗಳನ್ನು ತಯಾರಿಸುತ್ತಿರುವ ಮಕ್ಕಳ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಶ್ರೀರಾಮ ವಿದ್ಯಾ–ಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್ ಹಾಗೂ ಶ್ರೀರಾಮ ಪಿಯು ಕಾಲೇಜಿನ ಪ್ರಾಂಶುಪಾಲರಾದ ವಸಂತ ಬಲ್ಲಾಳ ಶ್ರೀಮಾನ್ ಮತ್ತು ವಿಶ್ವಾರ ಟೆಕ್ನಾಲಜೀಸ್ ಮಂಗಳೂರು ಇದರ ಸಂಪನ್ಮೂಲ ವ್ಯಕ್ತಿಯಾದ ಶ್ರೀಕಾಂತ್ ಉಪಸ್ಥಿತರಿದ್ದರು. 31 ಶಾಲೆಗಳ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸ್ಫೂರ್ತಿದಾಯಕ ಕಲ್ಪನೆ ಮತ್ತು ವಿಜ್ಞಾನ ಮಾದರಿ ತಯಾರಿ ಹಾಗು ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಶ್ರೀರಾಮ ಪ್ರಾಥಮಿಕ ಪ್ರೌಢಶಾಲೆ, ಪಿಯುಸಿ ಹಾಗೂ ಶ್ರೀರಾಮ ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳು ವಸ್ತುಪ್ರದರ್ಶನ ವೀಕ್ಷಿಸಿದರು. ಸಂಜನಾ ಕಾರ್ಯಕ್ರಮ ನಿರ್ವಹಿಸಿದರು, ಜಯಲಕ್ಷ್ಮಿ ಸ್ವಾಗತಿಸಿ, ಕೃತಿ ವಂದಿಸಿದರು.

**ಸಾಮೂಹಿಕ ಹುಟ್ಟುಹಬ್ಬ ಆಚರಣೆ 30.06.2023**

ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ವಿದ್ಯಾರ್ಥಿಗಳು ಪುಷ್ಪಾರ್ಚನೆ ಮತ್ತು ನಿಧಿ ಸಮರ್ಪಣೆ ಮಾಡಿ ಮಾತಾಜಿಗಳಿಂದ ತಿಲಕ ಧಾರಣೆ ಮತ್ತು ಆರತಿ ಬೆಳಗಿಸಿಕೊಂಡು ಆಶೀರ್ವಾದ ಪಡೆದರು.

## ಪದವಿ

**ವಿಶ್ವ ಪರಿಸರ ದಿನಾಚರಣೆ "ವಿವೇಕ ಸಂಜೀವಿನಿ" ಕಾರ್ಯಕ್ರಮದಲ್ಲಿ ಭಾಗಿ** 05.06.2023

2023ರ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ವಿವೇಕಾನಂದ ವಿದ್ಯಾವರ್ಧಕ ಸಂಘವು ಔಷಧೀಯ ಸಸ್ಯಗಳ ಸಂರಕ್ಷಣೆ, ಸಂವರ್ಧನೆ, ಬಳಕೆ ಹಾಗೂ ಜನಜಾಗೃತಿಯ ಆಂದೋಲನಕ್ಕಾಗಿ "ವಿವೇಕ ಸಂಜೀವಿನಿ" ಎಂಬ ಯೋಜನೆಯನ್ನು ಆಯೋಜಿಸಿದ್ದು ತರಬೇತಿದಾರರ ತರಬೇತಿ ಶಿಬಿರವನ್ನು ವಿವೇಕಾನಂದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಏರ್ಪಡಿಸಿತ್ತು.

ಈ ಕಾರ್ಯಕ್ರಮದಲ್ಲಿ ಶ್ರೀರಾಮ ಪದವಿ ವಿಭಾಗದಿಂದ ಪ್ರಸನ್ನಾ ಮಾತಾಜಿ ಹಾಗೂ ರಚನಾ ಮಾತಾಜಿ ಭಾಗವಹಿಸಿದರು. ಔಷಧೀಯ ಸಸ್ಯಗಳ ಪರಿಚಯದ ಕುರಿತು ಸಸ್ಯ ತಜ್ಞರಾದ ದಿನೇಶ್ ನಾಯಕ್, ವಿಟ್ಲ ಮಾತನಾಡಿದರೆ ಪ್ರಾಯೋಗಿಕವಾಗಿ ಹೇಗೆ ಸಸ್ಯಗಳ ವರ್ಧನೆ ಹಾಗೂ ಪೋಷಣೆ ಮಾಡಬೇಕು ಎಂಬುದನ್ನು ಶ್ರೀ ವಸಂತ ಕಜೆಯವರು ತಿಳಿಸಿದರು. ನಂತರ ಸಾಮಾನ್ಯ ಕಾಯಿಲೆಗಳಿಗೆ ಸರಳ ಪರಿಹಾರಗಳ ಕುರಿತು ಡಾ. ಜೆಡ್ಡು ಗಣಪತಿ ಭಟ್ ಅವರು ಸಂವಾದ ನಡೆಸಿದರು.

**ಅಂತರ್ ಕಾಲೇಜು ಐಟಿ ಫೆಸ್ಟ್‌ನಲ್ಲಿ ಭಾಗಿ 7.6.23**

ಪುತ್ತೂರಿನ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಅಂತರ್ ಕಾಲೇಜು ಐಟಿ ಫೆಸ್ಟ್ ನಲ್ಲಿ ನಮ್ಮ ಕಾಲೇಜಿನ ಗಣಕ ವಿಜ್ಞಾನ ವಿಭಾಗದ 16 ವಿದ್ಯಾರ್ಥಿಗಳು ಭಾಗವಹಿಸಿದರು.

**ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡುವ ಯೋಜನೆ**



ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶ್ರೀರಾಮ ಪದವಿ ವಿಭಾಗದ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳಿಂದ ಕಾಲೇಜಿನ ಹಿತ್ತಲಲ್ಲಿ ಔಷಧೀಯ ಗಿಡ ನೆಡುವ ಯೋಜನೆ ರೂಪಿಸಲಾಯಿತು. ಈ ಹಿಂದೆ ಆ ಜಾಗದಲ್ಲಿದ್ದ ಕಳೆ ಗಿಡಗಳನ್ನು ತೆಗೆಯುವ ಮೂಲಕ ಶ್ರಮಸೇವೆ ನಡೆಸಲಾಯಿತು.

**ಸಂದರ್ಶನ ತರಬೇತಿ**




27.06.2023 ರಂದು ಜಾಯ್ ಅಲುಕ್ಕಾಸ್ ಕಂಪನಿಯು ಪ್ಲೇಸ್ಮೆಂಟ್ ಮತ್ತು ಟ್ರೈನಿಂಗ್ ಸೆಲ್ ಸಹಯೋಗದೊಂದಿಗೆ ಅಂತಿಮ ವರ್ಷದ ಹುಡುಗರಿಗೆ ಸಂದರ್ಶನವನ್ನು ತೆಗೆದುಕೊಂಡಿತು. ಇಬ್ಬರು ಮಾನವ ಸಂಪನ್ಮೂಲ ಪ್ರತಿನಿಧಿಗಳು ಸಂದರ್ಶನವನ್ನು ತೆಗೆದುಕೊಂಡರು. ನಮ್ಮ ವಿದ್ಯಾರ್ಥಿಗಳು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದರು. 21 ವಿದ್ಯಾರ್ಥಿಗಳಲ್ಲಿ 19 ವಿದ್ಯಾರ್ಥಿಗಳು ಮುಂದಿನ ಸುತ್ತಿಗೆ ಆಯ್ಕೆಯಾಗಿದ್ದಾರೆ. ವಿದ್ಯಾರ್ಥಿಗಳ ಸಾಮರ್ಥ್ಯ ಮತ್ತು ನೋಟದ ಬಗ್ಗೆ ಸಂದರ್ಶಕರು ಮೆಚ್ಚುಗೆ ಸೂಚಿಸಿದರು.

**ಎನ್.ಎಸ್.ಎಸ್ ಯೋಜನಾಧಿಕಾರಿಗಳ ತರಬೇತಿ**

ರಾಜ್ಯ ಎನ್.ಎಸ್.ಎಸ್ ಕೋಶ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಮತ್ತು ಯುನೈಟೆಡ್ ನ್ಯಾಷನಲ್ ಡೆವಲಪ್ಮೆಂಟ್ ಪ್ರೋಗ್ರಾಮ್ ಇದರ ಸಹಯೋಗದೊಂದಿಗೆ ಎನ್.ಎಸ್.ಎಸ್ ಯೋಜನಾಧಿಕಾರಿಗಳಿಗೆ ಕ್ಯಾ–ರಿಯರ್ guidance session ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಗಾರವನ್ನು ಜೂಮ್ ಮೀಟ್ ಅಲ್ಲಿ ಆಯೋಜಿಸಲಾಗಿದ್ದು ಎನ್.ಎಸ್.ಎಸ್ ಸಂಯೋಜನಾಧಿಕಾರಿ ಯತಿರಾಜ್ ಪಿ ಇವರು ಭಾಗವಹಿಸಿದರು.



**ವಿಶ್ವ–ಪರಿಸರ ದಿನಾಚರಣೆ 5.6.2023**

ಎನ್.ಸಿ.ಸಿ ಹಾಗೂ ಸ್ಕೌಟ್ ಗೈಡ್ ತಂಡದ ವಿದ್ಯಾರ್ಥಿಗಳು ಗಿಡ ನೆಟ್ಟು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛಗೊಳಿಸಿದರು. ಚಿತ್ರಕಲಾ ಸ್ಪರ್ಧೆ ನೆರವೇರಿತು, ಭೂಷಣ್ ಪರಿಸರದ ಬಗ್ಗೆ ವಿವರಿಸಿದನು. ನಿನಾದ್ ನಿರೂಪಿಸಿದನು.




**ಅಂತರಾಷ್ಟ್ರೀಯ ಯೋಗ ದಿನಾಚರಣೆ 21.06.23**

ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಇವರು ದೀಪ ಪ್ರಜ್ವಲನೆ ಮಾಡುವ ಮೂಲಕ ಉದ್ಘಾಟಿಸಿ ದಿನದ ಮಹತ್ವದ ಕುರಿತು ಮಾತನಾಡಿದರು. ಹಿರಿಯ ವಿದ್ಯಾರ್ಥಿಗಳು, ಯೋಗಪಟುಗಳು ಉಪಸ್ಥಿತರಿದ್ದರು.




**ಬೀಜಾರೋಪಣ ಹಾಗೂ ಔಷಧಿ ಸಸಿಗಳ ಪೋಷಣ ಹಬ್ಬ 23.6.23**

ವಿವೇಕ ಸಂಜೀವಿನಿ ಯೋಜನೆಯ ಕಾರ್ಯಕ್ರಮ "ಬೀಜಾರೋಪಣ ಮತ್ತು ಔಷಧಿ ಸಸಿಗಳ ಪೋಷಣ ಹಬ್ಬ" ಕಾರ್ಯಕ್ರಮವನ್ನು ಬಾಳ್ತಿಲ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಹಿರಣ್ಮಯಿ ಉದ್ಘಾಟಿಸಿದರು.



**ಔಷಧೀಯ ವನ ನಿರ್ಮಾಣ ಹಾಗೂ ಸಸಿ ವಿತರಣಾ ಕಾರ್ಯಕ್ರಮ 29.06.2023**

ಶ್ರೀ ಗಣೇಶ ಮಂದಿರ ಗೋಳ್ತಮಜಲು ಇಲ್ಲಿ ಶ್ರೀರಾಮ ಪ್ರೌಢಶಾಲೆ ಹಾಗೂ ಗೋಳ್ತಮಜಲು ಗ್ರಾಮ ವಿಕಾಸ ಸಮಿತಿ ವತಿಯಿಂದ ನಡೆದ ಕಾರ್ಯಕ್ರಮವನ್ನು ಗೋಳ್ತಮಜಲು ಗ್ರಾಮ ಪಂಚಾಯತಿ ಅಧ್ಯಕ್ಷರಾದ ಅಭಿಷೇಕ್ ನೆಟ್ಲ ಉದ್ಘಾಟಿಸಿದರು.

## ಸೆಕೆಂಡರಿ ಸ್ಕೂಲ್



**ಯೋಗ ದಿನಾಚರಣೆ 21.06.2023**

ಕು. ವೆನಿಲ್ಲಾ ಮಣಿಕಂಠರವರು ಯೋಗದ ಮಹತ್ವವನ್ನು ತಿಳಿಸಿಕೊಟ್ಟರು. ದೈಹಿಕ ಶಿಕ್ಷಣ ಶಿಕ್ಷಕಿಯಾದ ಶ್ರೀಮತಿ ಹರ್ಷಿತ ಮಾತಾಜಿ ಉಪಸ್ಥಿತರಿದ್ದರು. ತೀರ್ಥ ಶೆಟ್ಟಿ ನಿರೂಪಿಸಿ, ವಾಸವಿ ಸ್ವಾಗತಿಸಿ, ಅದಿತಿ ವಂದಿಸಿದರು.



**ಗ್ರಂಥಾಲಯದ ಭೇಟಿ 15.06.2023**

ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ವಿದ್ಯಾರ್ಥಿಗಳಿಗೆ ಗ್ರಂಥಾಲಯದ ಬಗ್ಗೆ ಗ್ರಂಥಪಾಲಕರಾದ ಉದಯ ಶ್ರೀಮಾನ್ ಮತ್ತು ಸಹನಾ ಮಾತಾಜಿ ಮಾಹಿತಿ ನೀಡಿದರು.

## ಪದವಿಪೂರ್ವ




**ಹಸಿರಿನ ಹಸಿವು ಕಾರ್ಯಾಗಾರ 23.6.2023**

ಭೂಮಿಕಾ ಪರಿಸರ ಸಂಘದ ವತಿಯಿಂದ ಹಸಿರಿನ ಹಸಿವು ಎಂಬ ವಿಷಯದ ಕುರಿತು ಔಷಧೀಯ ಸಸ್ಯಗಳ ಬಗ್ಗೆ ಖ್ಯಾತ ಸಸ್ಯ ತಜ್ಞರಾದ ಶ್ರೀ ವಸಂತ ಕಜೆ ಉಪನ್ಯಾಸ ನೀಡಿದರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ನಿರ್ದೇಶಕರಾದ ಕರುಣಾಕರ ಶ್ರೀಮಾನ್ ವಹಿಸಿದ್ದರು.




**ಕಂಪನಿ ಸೆಕ್ರೆಟರಿ ಕಾರ್ಯಾಗಾರ 23.6.2023**

ಭಾಮತೀ ವಾಣಿಜ್ಯ ಸಂಘದ ವತಿಯಿಂದ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಕಾರ್ಯಾಗಾರವನ್ನು ದಿ ಇನ್ಸಿಟ್ಯೂಟ್ ಆಫ್ ಕಂಪನಿ ಸೆಕ್ರೆಟರಿ ಆಫ್ ಇಂಡಿಯಾ ಮಂಗಳೂರು ಶಾಖೆಯ ಸಹಾಯಕ ಕಾರ್ಯನಿರ್ವಹಣಾಧಿಕಾರಿ ಶ್ರೀ ಸಂತೋಷ್ ಪ್ರಭು ಕಾರ್ಯಕ್ರಮ ನಡೆಸಿಕೊಟ್ಟರು.



**ಎಟಿಎಲ್ ಕಾರ್ಯಾಗಾರ 30.6.2023**

ಅಜಿತ ಕುಮಾರ ಸಭಾ ಭವನದಲ್ಲಿ ದ.ಕ.ಜಿಲ್ಲಾ ಎಟಿಎಲ್ ಪ್ರಯೋಗಾಲಯಗಳ ಒಂದು ದಿನದ ಕಾರ್ಯಾಗಾರ ನಡೆಯಿತು. ಮಂಗಳೂರು ಡಯಟ್ ಸಂಸ್ಥೆಯ ಜಿಲ್ಲಾ ಎಟಿಎಲ್ ನೋಡಲ್ ಅಧಿಕಾರಿ ಶ್ರೀಮತಿ ವೇದಾವತಿ ದೀಪ ಬೆಳಗಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು.

## ಪದವಿ



**Commerce and Design Fest ನಲ್ಲಿ ಸಮಗ್ರ ಪ್ರಶಸ್ತಿ 08.06.2023**

ವಾಣಿಜ್ಯ ವಿಭಾಗದ 26 ವಿದ್ಯಾರ್ಥಿಗಳು ಪುತ್ತೂರಿನ ಅಕ್ಷಯ ಕಾಲೇಜಿನಲ್ಲಿ ನಡೆದ ಫೆಸ್ಟ್‌ನಲ್ಲಿ ಭಾಗವಹಿಸಿ 31 ಕಾಲೇಜುಗಳ ಜೊತೆ ಸ್ಪರ್ಧಿಸಿ ಸಮಗ್ರ ಪ್ರಶಸ್ತಿ ಪಡೆದಿರುತ್ತಾರೆ.



**ನ್ಯಾಯಾಲಯದ ಪ್ರಾತ್ಯಕ್ಷಿಕೆ. 09.06.2023**

ವಿವೇಕಾನಂದ ಕಾನೂನು ಮಹಾವಿದ್ಯಾಲಯ ಪುತ್ತೂರಿನ ಪ್ರಾಧ್ಯಾಪಕರು ಹಾಗೂ ಕಾನೂನು ವಿದ್ಯಾರ್ಥಿಗಳು ನ್ಯಾಯಾಲಯದ ಕೆಲಸದ ಪ್ರಾತ್ಯಕ್ಷಿಕೆಯನ್ನು ತೋರಿಸಿದರು. ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು ಉಪಸ್ಥಿತರಿದ್ದರು.



**Faculty Development Program on AI ಶಿಕ್ಷಕರ ತರಬೇತಿ ಕಾರ್ಯಾಗಾರ 26.6.23**

ಉಪನ್ಯಾಸಕವರ್ಗದವರಿಗೆ ನಡೆದ ಈ ಕಾರ್ಯಗಾರವನ್ನು ವಿವೇಕಾನಂದ ಕಾಲೇಜಿನ Management Studies ವಿಭಾಗದ ಸಹ ಪ್ರಾಧ್ಯಾಪಕರಾದ ಶ್ರೀ ರಾಕೇಶ್ ಎಂ ಇವರು ನಡೆಸಿಕೊಟ್ಟರು.



**ಉನ್ನತ ವ್ಯಾಸಂಗ ಮತ್ತು ಅವಕಾಶಗಳ ಕುರಿತು ದೃಷ್ಟಿಕೋನ ಕಾರ್ಯಕ್ರಮ 30.06.2023**

ವಿವೇಕಾನಂದ ಸ್ನಾತಕೋತ್ತರ ವಿಭಾಗದ ಶ್ರೀಮತಿ ಲಕ್ಷ್ಮೀ ವಿ.ಭಟ್ ಅವರು ಉನ್ನತ ವ್ಯಾಸಂಗ ಮತ್ತು ಅವಕಾಶಗಳ ಕುರಿತು ದೃಷ್ಟಿಕೋನ, ಪ್ರಯೋಜನಗಳು ಮತ್ತು ಅವಕಾಶಗಳ ಕುರಿತು ಚರ್ಚಿಸಿದರು.



**Economics Fest 2023" ಭಾಗಿ 09.06.2023**

ಯುನಿವರ್ಸಿಟಿ ಕಾಲೇಜು ಮಂಗಳೂರು ಇಲ್ಲಿ "ಅರ್ಥ" "Economics Fest 2023" ನಡೆಯಿತು. ಈ ಫೆಸ್ಟ್‌ನಲ್ಲಿ ಕಾಲೇಜಿನ ಕಲಾ ವಿಭಾಗದ 10 ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ. ಕಲಾ ವಿಭಾಗದ ಉಪನ್ಯಾಸಕರು ಮಾರ್ಗದರ್ಶನ ಮಾಡಿದರು.




**ಕಂಪೆನಿ ಸೆಕ್ರೆಟರಿ ಕಾರ್ಯಾಗಾರ 12.6.23**

ಐಸಿಎಸ್‌ಐ ಸಂಸ್ಥೆಯ ಪದಾಧಿಕಾರಿಗಳು ಕಂಪೆನಿ ಸೆಕ್ರೆಟರಿ ಉದ್ಯೋಗದ ಪ್ರಾಮುಖ್ಯತೆ, ಅವಕಾಶಗಳು ಮತ್ತು ಕಲಿಕೆಯ ಕ್ರಮಗಳ ಬಗ್ಗೆ ಶ್ರೀ ಸಿ ಎಸ್ ಸಂತೋಷ್ ಪ್ರಭು ಹಾಗೂ ಶ್ರೀ ಸಿ ಎಸ್ ಯೋಗೀಶ್ ತಿಳಿಸಿದರು.



**ವಿಶ್ವ ಯೋಗ ದಿನಾಚರಣೆ**

ವಿದ್ಯಾರ್ಥಿಗಳು ವಿವಿಧ ಆಸನಗಳನ್ನು ಮಾಡುವುದರ ಮೂಲಕ ಕಾರ್ಯಕ್ರಮವನ್ನು ಆಚರಿಸಲಾಯಿತು. ದಿನದ ಮಹತ್ವವನ್ನ ಪದವಿ ವಿಭಾಗದ ಪ್ರಾಚಾರ್ಯರಾದ ಕೃಷ್ಣ ಪ್ರಸಾದ್ ಕಾಯರ್ ಕಟ್ಟೆ ತಿಳಿಸಿದರು.



**ಭೌತಶಾಸ್ತ್ರ ಸ್ಪರ್ಧೆಗಳಲ್ಲಿ ಸಮಗ್ರ ಪ್ರಶಸ್ತಿ**

ಉಜಿರೆಯ ಎಸ್‌ಡಿಯಂ ಕಾಲೇಜಿನಲ್ಲಿ ನಡೆದ ಭೌತಶಾಸ್ತ್ರ ಸ್ಪರ್ಧೆಗಳಲ್ಲಿ ವಿಜ್ಞಾನ ವಿಭಾಗದ 8 ವಿದ್ಯಾರ್ಥಿಗಳು ಭಾಗವಹಿಸಿದ್ದು ಸಮಗ್ರ ಪ್ರಶಸ್ತಿಗಳಿಸಿ ಕಾಲೇಜಿಗೆ ಕೀರ್ತಿ ತಂದಿರುತ್ತಾರೆ.



**ಕೌಶಲ್ಯ ವರ್ಧನೆಯ ಕಾರ್ಯಕ್ರಮ 28.07.2023**

ವೃತ್ತಿಪರತೆ ಮತ್ತು ಅಡಾಪ್ಟೋಜೆನ್ ವಿಷಯದ ಮೇಲೆ ಕೌಶಲ್ಯ ವರ್ಧನೆಯ ಕಾರ್ಯಕ್ರಮದಲ್ಲಿ ಸಂಪನ್ಮೂಲವ್ಯಕ್ತಿಯಾಗಿ ಚಾಣಕ್ಯ ವಿಶ್ವವಿದ್ಯಾನಿಲಯದ ಪ್ರಶಾಂತ್ ರವರು ಹಾಗೂ ಶ್ರೀ ವೆಂಕಟೇಶ್ ಭಾಗವಹಿಸಿದ್ದರು.

**ಶ್ರೀರಾಮ ಪ್ರೌಢಶಾಲೆಯಲ್ಲಿ "ಸ್ಮಾರ್ಟ್ ಕ್ಲಾಸ್ ಉದ್ಘಾಟನೆ" 27.06.2013**

ಪ್ರಣವ್ ಫೌಂಡೇಶನ್ ಬೆಂಗಳೂರು ಇವರು ಒದಗಿಸಿದ ಸ್ಮಾರ್ಟ್ ಕ್ಲಾಸ್ ಸೌಲಭ್ಯವನ್ನು ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇದರ ಅಧ್ಯಕ್ಷರು ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರು ಉದ್ಘಾಟಿಸಿದರು. ಪ್ರಣವ ಫೌಂಡೇಶನ್ ಬೆಂಗಳೂರು ಇದರ ಸ್ಥಾಪಕ ಅಧ್ಯಕ್ಷರಾದ ಶ್ರೀ ರಾಕೇಶ್ ರೈ, ನಿರ್ದೇಶಕರಾದ ಶ್ರೀ ಮಂಜುನಾಥ ಉಡುಪ, ಶ್ರೀ ಅಮಿತ್ ಹೆಬ್ಬಾಳ್ ಕಾರ್ಯದರ್ಶಿಗಳು, ಸದಸ್ಯರಾದ ನೇತ್ರ ಎನ್, ಪ್ರಿಯ ರಕ್ಷಿತ್, ಕುಸುಮಾಧರ ರೈ, ವಿಷ್ಣು ಕಟ್ಟಿ, ರಕ್ಷಿತ್ ಗೌಡ, ನಾಗರಾಜ್ ಮತ್ತು ವಿದ್ಯಾಕೇಂದ್ರದ ಶ್ರೀ ವಸಂತ ಮಾಧವ, ಶ್ರೀ ರಮೇಶ್ ಎನ್, ಶ್ರೀಮತಿ ಶಾಂಭವಿ, ಶ್ರೀಮತಿ ಲಕ್ಷ್ಮೀ ರಘುರಾಜ್, ಶ್ರೀಮತಿ ಸುಧಾ ಭಟ್, ಶ್ರೀ ಗೋಪಾಲ ಎಂ. ಉಪಸ್ಥಿತರಿದ್ದರು.



ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

ಚಿನ್ನಾಭರಣ ಸಾಲ – 10.5%
ಜಾಮೀನು ಸಾಲ – 16%
ಅಡವು ಸಾಲ – 13%
ವಾಹನ ಸಾಲ – 11.5%
ಗೃಹ ನಿರ್ಮಾಣ ಸಾಲ – 11%

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

91ದಿನಗಳವರೆಗೆ – 7%
92ರಿಂದ 181 ದಿನಗಳು – 7.5%
182 ರಿಂದ 364 ದಿನಗಳು – 8.5%
1 ವರ್ಷ ಮತ್ತು ಮೇಲ್ಪಟ್ಟು – 9%

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.

Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

ಸರಯೂ

Vol. : 10 Issue :2 Rs. 10/-

KARKAN/2014/62363
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in / www.srvk.org E-mail : info@srvk.org

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763 Printed at Digantha Mudrana Ltd. Magaluru 575008, Bantwal Tq., Dakshina Kannada, Karnataka. Registration No. : KARKAN/2014/62363